ಗಿಲ್ಲ. ಅವರ ಹೇಳಿಕೆಯನ್ನು ನೋಡಿದಾಗ He states, "It is our right, the Centre cannot stop it. N. T. Rama Rao, declares that the Government intended to carry on with the implementation of the controversial Telugu Ganga Project, regardless whether the Centre approved it or not. Whether it is cleared it or not, the project will be carried on. ಸ್ವಾಮಿ. ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆ್ಯಕ್ಟ್‌ನ್ನು ಧಿಕ್ಕರಿಸಿ ನಡೆದುಕೊಳ್ಳುವ ಶಕ್ತಿ ಯಾರಿಗೂ ಇಲ್ಲ. ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆ್ಯಕ್ಟ್ ವ್ಯಾಪ್ತಿಯಲ್ಲಿ ಸಂಬಂಧಪಟ್ಟಿಂತಹ ರಾಜ್ಯಗಳ ಪಂಚಾಯಿತಿದಾರರು ಕೊಟ್ಟಿರತಕ್ಕ ತೀರ್ಪಿಗೆ ಮಾನ್ಯತೆ ಮಾಡದೇ ಹೋದರೆ ಕೇಂದ್ರ ಸರ್ಕಾರಕ್ಕೆ ಅಂತಿಮ ಅಧಿಕಾರ ಇದೆ. ಯಾವ ರಾಜ್ಯ ಸರ್ಕಾರ ಇದರಲ್ಲಿ ಉಲ್ಲಂಘನೆ ಮಾಡುತ್ತದೆ ಆ ಸರ್ಕಾರವನ್ನು, ಅಥವಾ ತೀರ್ಪನ್ನು ಜಾರಿಗೆ ತರತಕ್ಕಂಥಾದ್ದಕ್ಕೆ ಯಾವ ಕ್ರಮ ತೆಗೆದುಕೊಳ್ಳಬೇಕೋ ಆ ಬಂದು ಕಾನೂನು ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆ್ಯಕ್ಟ್‌ನಲ್ಲಿ ಅಡಕವಾಗಿದೆ. ಅವರು ಹೇಳಿರತಕ್ಕದ್ದು ರಾಜಕೀಯ ಹೇಳಿಕೆಯೇ ಪರಂತು ಕಾನೂನಿನ ಚೌಕಟ್ಟಿನ ಹೇಳಿಕೆಯಲ್ಲ ಎಂದು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ. ಯಾವುದೇ ಕಾರಣ ದಿಂದ ನಮ್ಮ ನೀರಿನ ಹಕ್ಕನ್ನು ಬೇರೆಯವರಿಗೆ ಬಿಟ್ಟುಕೊಡಲಿಕ್ಕೆ ಸಿದ್ಧ ಇಲ್ಲ. ಆ ಹಕ್ಕನ್ನು ಉಳಿಸಿ ಕೊಳ್ಳಲಿಕ್ಕೆ ಅವಶ್ಯ ಇದ್ದರೆ ಎಲ್ಲಾ ತ್ಯಾಗಕ್ಕೂ ಸಿದ್ಧರಾಗಬೇಕಾಗುತ್ತದೆ. ಇದು ಕೇವಲ ಒಂದು ಪಕ್ಷದ ಪ್ರಶ್ನೆಯಲ್ಲ. ಇಡೀ ರಾಜ್ಯದ ಪ್ರಶ್ನೆ ಇದೆ. ತಾವೆಲ್ಲರೂ ಇದರ ಬಗ್ಗೆ ಸಮಾಲೋಚನೆ ಮಾಡ ಬೇಕಾಗುತ್ತದೆ. ಇದು ಸಂಪನ್ಮೂಲದ ಪ್ರಶ್ನೆ ಇದೆ.ಅದಕ್ಕೋಸ್ಕರ ಹೇಳಿದೆ, ಈ ಒಂದು ವಿಷಯದ ಬಗ್ಗೆ ನಾನು ಸವಾಲು ಎಂದು ಹೇಳುವುದಿಲ್ಲ. ನಮ್ಮ ಒಂದು ಹನಿ ನೀರನ್ನು ಕೂಡ ಅಕ್ರಮಣ ಮಾಡಲಿಕ್ಕೆ ಈ ಸರ್ಕಾರ ಅವಕಾಶ ಕೊಡುವುದಿಲ್ಲ. ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಂಗನವಾಡಿ ನೌಕರರ ಕುರಿತಂ

ಶ್ರೀ ಆರ್. ರಾಮಯ್ಯ.—ಸಮಗ್ರ ಬಾಲವಿಕಾಸ ಯೋಜನೆಯಂ ಯಶಸ್ವಿಯಾಗಲಂ ಆಯಾ ಗ್ರಾಮಗಳಲ್ಲಿರುವ ಮಹಿಳೆಯರನ್ನು ಅಂಗನವಾಡಿ ಕಾರ್ಯಕರ್ತರನ್ನಾಗಿ ಆಯ್ಕೆ ಮಾಡಿಕೊಳ್ಳಲು ಸರ್ಕಾರದ ಆದೇಶವಿದೆ. ಆದರೆ ಹಿರಿಯೂರು ತಾಲ್ಲೂಕಿನಲ್ಲಿ ಆಯ್ಕೆಯ ಸಮಿತಿಗೆ ಇದರ ನಿರ್ದೇಶನ ಇಲ್ಲವಾಗಿದೆಯೋ ಏನು ತಿಳಿಯದಾಗಿದೆ. ಬಹುತೇಕ ಕಾರ್ಯಕರ್ತೆಯರು ಪಟ್ಟಣದ ವಾಸಿಗಳಾಗಿದ್ದು ೯ ಗಂಟೆಗೆ ಪ್ರಾರಂಭವಾಗುವ ಈ ಶಾಲೆಗಳಿಗೆ ೧೦ ಗಂಟೆಯ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಸ್ಥಳ ಸೇರುವ ಹೊತ್ತಿಗೆ ಶಾಲೆಯನ್ನು ಮುಚ್ಚುವ ಸಮಯವಾಗಿರುತ್ತದೆ. ಇದರಿಂದಾಗಿ ಆಯ್ಕೆ ವ್ಯವಸ್ಥೆಯು ಸಮರ್ಪಕವಾಗಿಲ್ಲ. ಮನೆ ಬಾಗಿಲಲ್ಲೇ ನಡೆಯುವ ಹಳ್ಳಿಗಾಡಿನ ಅಂಗನವಾಡಿ ಶಾಲೆಗಳಿಗೆ ಆಯ್ಕೆಯ ಗ್ರಾಮಾಂತರ ವಿದ್ಯಾವಂತ ಮಹಿಳೆಯರಿಗೆ ಇದರ ಉಪಯೋಗದಿಂದ ವಂಚಿತವಾಗಿದೆ. ಜೊತೆಗೆ ಅನೇಕ ಕಾರ್ಯಕರ್ತೆಯರು ನೌಕರರ ಪತ್ನಿಯರಾಗಿದ್ದು ಇನ್ನು ಕೆಲವರು ಉತ್ತಮ ಸ್ಥಿತಿವಂತರಾಗಿರುತ್ತಾರೆ. ಇದರ ಒಟ್ಟಿನ ಸಮಗ್ರ ಚಿತ್ರ ಸುಳ್ಳು ವಿಳಾಸದೊಂದಿಗೆ ಸೇರ್ಪಡೆಯಾಗಿರುವುದು, ಉದ್ದೇಶಿಸಲ್ಪಟ್ಟವರಿಗೆ ಕೊಡುವ ನೆಪಕ್ಕಾಗಿ ಸರಿಯಾಗಿ ಜಾಹೀರಾತು ಮಾಡಿಲ್ಲದಿರುವುದು ಕಾರಣಗಳಾಗಿವೆ. ಜೊತೆಗೆ ಜಿಲ್ಲಾಧಿಕಾರಿಗಳ ಸಹ ಕೇಂದ್ರದಲ್ಲಿರುವಂತೆ ಆದೇಶಿಸಿದ್ದಾಗ್ಯೂ ಅಲ್ಲಿಯ ಬಾಲವಿಕಾಸ ಯೋಜನಾಧಿಕಾರಿಯವರು ಸಂಬಂಧಿಕರ ವಿಳಾಸಕೊಟ್ಟು ಸತ್ಯವೂ ೨-೦೦ ಗಂಟೆಗೆ ಚಿತ್ರದುರ್ಗದಿಂದ ಬಂದು ಕೆಲಸಕ್ಕೆ ಹಾಜರಾಗುತ್ತಾರೆ. ಈಗಾಗಲೇ ಸುಮಾರು ೩೦ ಕಾರ್ಯಕರ್ತೆಯರು ಪಟ್ಟಣವಾಸಿ ಗಳೆಂದು ಗುರುತಿಸಿದ್ದಾರೆ. ಇವರ ಸೇವೆಯನ್ನು ಹಿಂದಕ್ಕೆ ಪಡೆದು ಆ ಗ್ರಾಮದ ಮಹಿಳೆಯರಿಗೆ ಸೇವೆಯ ಅವಕಾಶವನ್ನು ಪಡಿತಿಕೊಡಬೇಕು, ಇದರೊಂದಿಗೆ ಬೇರೆ ಬೇರೆ ವಿಳಾಸದಲ್ಲಿ ಸೇರ್ಪಡೆಯಾಗಿರುವವರನ್ನು ಪತ್ತೆ ಹಚ್ಚಿ ಅವರನ್ನು ಸೇವೆಯಿಂದ ಬರ್ತಾಫ್ ಮಾಡಿ ಹಳ್ಳಿಗಾಡಿನವರಿಗೆ ಸೇವೆಯ ಅವಕಾಶವನ್ನು ಕಲ್ಪಿಸಬೇಕಾಗಿ ಕೋರುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಬಗ್ಗೆ ಮಾರ್ಗಸೂಚಿಯನ್ನು ಎಲ್ಲಾ ಆಯ್ಕೆ ಸಮಿತಿಗಳು ಅರಿತಿವೆ. ಈ ಬಗ್ಗೆ ಸುತ್ತೋಲೆಗಳನ್ನು ಸಮಾಜ ಕಲ್ಯಾಣ ಇಲಾಖೆಯು ಎಲ್ಲಾ ಸಹಾಯಕ ನಿರ್ದೇಶಕರಿಗೂ ಮತ್ತು ಬಾಲ ವಿಕಾಸ ಯೋಜನಾ ಅಧಿಕಾರಿಗಳಿಗೂ ಕಳುಹಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರನ್ನು ಸಾಧ್ಯವಾದಷ್ಟು ಮಟ್ಟಿಗೆ ಅಂಗನವಾಡಿ ಕೇಂದ್ರ ಇರುವ ಗ್ರಾಮದಿಂದಲೇ ಆಯ್ಕೆ ಮಾಡಬೇಕೆಂದು ಆದೇಶಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆಯನ್ನು ಈ ಹಿಂದೆಯೇ ಮಾಡಲಾಗಿದೆ. ೧೯೮೫-೮೬ ರಲ್ಲಿ ೧೦೦ ಜನ ಅಂಗನವಾಡಿ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲಾಗಿದೆ. ೧೯೮೪-೮೫ರಲ್ಲಿ ಸದರಿ ಯೋಜನೆಯ ವಿಸ್ತರಣೆಯನ್ವಯ ೬೬ ಹೆಚ್ಚುವರಿ ಅಂಗನವಾಡಿ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲಾಗಿದೆ. ಒಟ್ಟು ೧೯೬ ಅಂಗನವಾಡಿ ಕೇಂದ್ರಗಳಿದ್ದು ಈ ಪೈಕಿ ೨೧ ಕೇಂದ್ರಗಳು ಹಿರಿಯೂರು ನಗರ ಸಭೆಯ ವ್ಯಾಪ್ತಿಯಲ್ಲಿವೆ.

ಅಂಗನವಾಡಿ ಕಾರ್ಯಕರ್ತೆಯರು ಬೆಳಿಗ್ಗೆ ೯–೩೦ ರಿಂದ ಮಧ್ಯಾಹ್ನ ೧–೩೦ರ ವರೆಗೆ ಕೇಂದ್ರುಗಳನ್ನು ತೆರೆದಿರಲು ಕಟ್ಟುನಿಟ್ಟಾದ ಸೂಚನೆಗಳನ್ನು ನೀಡಲಾಗಿದೆ. ಯಾವುದೇ ಅಂಗನವಾಡಿ ಕಾರ್ಯಕರ್ತೆಯರು ಈ ಸೂಚನೆಯನ್ನು ಪಾಲಿಸದಿದ್ದಲ್ಲಿ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಅಂಗನವಾಡಿ ಕಾರ್ಯಕರ್ತೆಯರು ಸುಳ್ಳು ವಿಳಾಸ ನೀಡಿ ಆಯ್ಕೆಯಾಗಿದ್ದ ಪಕ್ಷದಲ್ಲಿ ಈ ಬಗ್ಗೆ ತನಿಖೆ ಮಡೆಸಿ ಕ್ರಮಕೈಗೊಳ್ಳಲಾಗುವುದು.

ಹಿರಿಯೂರು ಬಾಲ ವಿಕಾಸ ಯೋಜನಾಧಿಕಾರಿಗಳು ಕೇಂದ್ರ ಸ್ಥಳದಲ್ಲಿ (ಹಿರಿಯೂರಿನಲ್ಲಿ) ವಾಸ್ತವ್ಯ ಇಲ್ಲದಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು ಈಗಾಗಲೇ ಸದರಿಯವರ ಮೇಲೆ ಆಗಸ್ಟ್ ೮೫ರಲ್ಲಿ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ. ಬಾಲವಿಕಾಸ ಯೋಜನಾಧಿಕಾರಿಗಳು ಕೇಂದ್ರ ಸ್ಥಳಗಳಲ್ಲಿ ವಾಸ್ತವ್ಯ ಇರಲಂ ಸೂಚಿಸಿ ಕಟ್ಟುನಿಟ್ಟಾದ ಆದೇಶ ನೀಡಲಾಗಿದೆ.

(೩) ಹಿಂದುಳಿದ ವರ್ಗ, ಎಸ್.ಸಿ. ಮತ್ತು ಎಸ್.ಟಿ. ವರ್ಗದ ಯುವ ನ್ಯಾಯವಾದಿಗಳಿಗೆ ಕೊಡತಕ್ಕ ಹಣಕಾಸು ಸಹಾಯ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಕರ್ನಾಟಕದಲ್ಲಿ ಜ್ಯೂನಿಯರ್ ಲಾಯರುಗಳಿಗೆ ಪ್ರೋತ್ಸಾಹ ಕೊಡಲು ಸ್ಟೈಫಂಡ್ ಯಾ ಸಹಾಯಧನ ಕೊಡುವ ಹುಕುಂ ಜಾರಿಯಲ್ಲಿದೆ. ನೂರಾರು ವಕೀಲರನ್ನು ಸರಕಾರ ಈ ಬಗ್ಗೆ ಚೀನಾಯಿಸಿಕೊಂಡಿದೆ. ಆದರೆ ೧೯೮೫ ಸೆಪ್ಟೆಂಬರ್ ತಿಂಗಳಿಂದ ಫಂಡ್ಸ್ ರಿಲೀಜ್ ಆಗಿಲ್ಲವೆಂದು ಸಹಾಯಧನ ಕೊಡುವುದನ್ನು ನಿಲ್ಲಿಸಿರುವುದರಿಂದ ಮೊದಲೇ ತೊಂದರೆಯಲ್ಲಿದ್ದ ಈ ಜ್ಯೂನಿಯರ್ ವಕೀಲರಿಗೆ ಇನ್ನೂ ತೊಂದರೆ ಕೊಟ್ಟಂತಾಗಿದ್ದು ಅಂತಹ ವಕೀಲರು ಹೋರಾಟಕ್ಕೆ ಇಳಿದಿದ್ದಾರೆ. ಈ ಸಮಸ್ಯೆಯನ್ನು ಸದನದ ಮುಂದೆ ತರಲು ಅನುಮತಿ ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಮಾನ್ಯ ಕೆ. ಹೆಚ್. ಶ್ರೀನಿವಾಸ್ ಅವರು ಇದಕ್ಕೆ ಸಂಬಂಧಪಟ್ಟಂತೆ ನಿಯಮ ೩೩೪ರಲ್ಲಿ ಕೇಳಿದ್ದಾರೆ ಅವರು ಇದರ ಬಗ್ಗೆ ಪ್ರಸ್ತಾಪ ಮಾಡಿದರೆ, ಎರಡಕ್ಕೂ ಒಂದೇ ಸಾರಿ ಉತ್ತರ ಹೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಯುವ ನ್ಯಾಯವಾದಿಗಳಿಗೆ ಮಾಹೆಯಾನ ೫೦೦ ರೂಪಾಯಿಗಳ ಧನಸಹಾಯ ನೀಡಿ ಅವರಿಗೆ ಸೂಕ್ತ ತರಬೇತಿ ಪಡೆಯುವ ಅವಕಾಶ ಕಲ್ಪಿಸುವ ಯೋಜನೆ ರಾಜ್ಯದಲ್ಲಿ ಜಾರಿಯಲ್ಲಿದ್ದು ಸದರಿ ಯೋಜನೆ ಅನ್ವಯ ಹಿಂದುಳಿದ ವರ್ಗಕ್ಕೆ ಸೇರಿರುವ ನ್ಯಾಯವಾದಿಗಳಿಗೆ ಕಳೆದ ಸೆಪ್ಟೆಂಬರ್ ೧೯೮೫ ರಿಂದಲೂ ಈವರೆಗೆ ಇವರಿಗೆ ಸಲ್ಲಬೇಕಾದ ಮಾಹೆಯಾನ ೫೦೦ ರೂ. ಸಹಾಯಧನವನ್ನು ನೀಡದೆ ಇರುವುದರಿಂದ ಸದರಿ ಯುವ ನ್ಯಾಯವಾದಿಗಳಿಗೆ ತುಂಬಾ ತೊಂದರೆಯಾಗಿದೆ. ಸರಕಾರದಿಂದ ಈ ಬಗ್ಗೆ ಆಗತ್ಯ ಪ್ರಮಾಣದ ಹಣ ಬಿಡುಗಡೆಯಾಗದಿರುವುದೇ ಸದರಿ ತೊಂದರೆಗೆ ಕಾರಣವಾಗಿದೆಯೆಂದು ತಿಳಿದುಬಂದಿದೆ. ಈ ಬಗ್ಗೆ ಅಡ್ವೊಕೇಟ್ ಜನರಲ್‌ರವರಿಗೆ ಕಾನೂನು ಸಚಿವರಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ಹಲವಾರು ಬಾರಿ ದೂರು ಸಲ್ಲಿಸಿದರೂ ಈವರೆಗೂ ಏನೂ ಕ್ರಮ ಜರುಗಿಲ್ಲ. ಇದನ್ನೇ ನಂಬಿಕೊಳ್ಳದೆ ತಮ್ಮ ಪ್ರವೃತ್ತಿಯನ್ನು ಸ್ವಶಕ್ತಿಯಿಂದ ಬೆಳೆಸಿಕೊಳ್ಳಬೇಕೆಂಬ ಉಪದೇಶ ಮಾತ್ರ ದೊರಕಿದೆಯೆಂದು